# ಸಭಾಪತಿ ಹೊರಟ್ಟಿ ಅವರಿಂದ ಅನಿತಾ ಗಡ್ಡಿ ಅವರಿಗೆ ಸನ್ಮಾನ



**ಗದಗ:** ಹಿರಿಯ ರಾಜಕೀಯ ಮುತ್ಸದ್ದಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಶನಿವಾರ ಗದುಗಿಗೆ ಆಗಮಿಸಿದ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ಗದಗ–ಬೆಟಗೇರಿ ನಗರಸಭೆಯ ಚುನಾವಣೆಯಲ್ಲಿ 33ನೇ ವಾರ್ಡನ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆಯಾದ ಶ್ರೀಮತಿ ಅನಿತಾ ವಿಜಯಕುಮಾರ ಗಡ್ಡಿ ಅವರ ನಿವಾಸಕ್ಕೆ ಸೌಹಾರ್ದ ಭೇಟಿ ನೀಡಿ, ಅನಿತಾ ಹಾಗೂ ವಿಜಯಕುಮಾರ ದಂಪತಿಗಳಿಗೆ ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಹಲವು ಗಣ್ಯರು ಉಪಸ್ಥಿತರಿದ್ದರು.

# ಅಗಡಿ ಪರಿವಾರದಿಂದ ಜಿಲ್ಲಾ ಕಸಾಪ ಅಧ್ಯಕ್ಷರಿಗೆ ಸನ್ಮಾನ



ಮುಂಡರಗಿ, ಜ. 2.ಮುಂಡರಗಿ ಜ ಅನ್ನದಾನೀಶ್ವರ ವಿಧ್ಯಾಸಮಿತಿಯಲ್ಲಿ ಸೇವಾ ನಿವೃತ್ತಿ ಹೊಂದಿದ ಎಸ್ ಎಂ ಅಗಡಿ, ಅವರು ಸೇವಾ ನಿವೃತ್ತಿ ಹೊಂದಿದ್ದರಿಂದ ಅಗಡಿ ಪರಿವಾರದವರು ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅವರನ್ನು ಅವರನ್ನು ಸನ್ಮಾನಿಸಿದರು.

ಜ ನಾಡೋಜ ಡಾ ಅನ್ನದಾನೀಶ್ವರ ಮಹಾಸ್ವಾಮಿಗಳು, ಸಭಾಪತಿಗಳು ಬಸವರಾಜ ಹೊರಟ್ಟಿ, ವಿಪಸದಸ್ಯ ಎಸ್ ವ್ಹಿ ಸಂಕನೂರ ಆರ್ ಆರ್ ಹೆಗ್ಗಡಾಳ, ಡಾ ಬಿ ಜೆ ಜವಳಿ, ಡಿಡಿಪಿಐ ಬಸವಲಿಂಗಪ್ಪ, ಎಸ್ ಎಸ್ ಗಡ್ಡದ, ಮೊದಲಾದವರಿದ್ದರು.

# ವಿಜ್ಞಾನ ಮಂದಿರ-ಕಸಾಪ ಸಾಹಿತ್ಯ ಭವನ ಕಾಮಗಾರಿ ವೀಕ್ಷಣೆ



ಮುಂಡರಗಿ, ಜ. 2. ಮುಂಡರಗಿ ನಗರಕ್ಕೆ ಆಗಮಿಸಿದ ವಿಧಾನ ಪರಿಷತ್, ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರು, ವಿಧಾನ ಪರಿಷತ್ ಸದಸ್ಯರಾದ ಎಸ್ ವ್ಹಿ ಸಂಕನೂರ ಅವರು ನಗರದಲ್ಲಿ ನಿರ್ಮಾಣಗೊಳ್ಳುತ್ತಿರುವ ವಿಜ್ಞಾನ ಮಂದಿರ, ಹಾಗೂ ಸಾಹಿತ್ಯ ಭವನ ಕಟ್ಟಡ ಕಾಮಗಾರಿಯನ್ನು ಶನಿವಾರ ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಜಗದ್ಗುರು ಅನ್ನದಾನೀಶ್ವರ ವಿಧ್ಯಾಸಮಿತಿಯ ಆಡಳಿತಾಧಿಕಾರಿಗಳು ನಿವೃತ್ತ ಪ್ರಾಚಾರ್ಯರಾದ ಡಾ ಬಿ ಜಿ ಜವಳಿ, ಅವರು ಮಾತನಾಡಿ, ಪೂಜ್ಯರು ವಿಜ್ಞಾನ ಮಂದಿರ ಸಾಹಿತ್ಯ ಭವನಕ್ಕೆ ಭೂದಾನ ನೀಡಿದ್ದಾರೆ. ಸಾಹಿತ್ಯ ಶಿಕ್ಷಣ ಕ್ಷೇತ್ರದಲ್ಲಿ ಪೂಜ್ಯರು ಕ್ರಾಂತಿ ಮಾಡಿದ್ದಾರೆಂದು ಸಭಾಪತಿಗಳಾದ ಹೊರಟ್ಟಿ ಅವರ ಗಮನ ಸೆಳೆದರು.

ಸಭಾಪತಿಗಳಾದ ಹೊರಟ್ಟಿ ಅವರು ಮಾತನಾಡಿ, ಪೂಜ್ಯರ ಸೇವಾ ಕ್ರಾಂತಿ ಎಷ್ಟು ಪ್ರಶಂಸೆ ಮಾಡಿದರೂ ಕಡಿಮೆ ಎಂದರು.

ಈ ಸಮಯದಲ್ಲಿ ವಿ ಪಿ ಸದಸ್ಯ, ಎಸ್ ವ್ಹಿ ಸಂಕನೂರ, ಡಾ ಬಸವರಾಜ ಧಾರವಾಡ, ಕರಬಸಪ್ಪ ಹಂಚಿನಾಳ, ಪ್ರಾ ಡಾ ಡಿ ಸಿ ಮಠ, ಪ್ರಾ ಎ ವ್ಹಿ ಹಳ್ಳಿಕೇರಿ, ಎಸ್ ಬಿ ಹಿರೇಮಠ,ಯು ಸಿ ಹಂಪಿಮಠ, ಮುಖ್ಯೋಪಾಧ್ಯಾಯ ಎಸ್ ಸಿ ಚಕ್ಕಡಿಮಠ, ಜೆ ಎ ಬಿಇಡಿ ಕಾಲೇಜ ಪ್ರಾಚಾರ್ಯರು ಹಾಗೂ ಸಿಬ್ಬಂದಿ,ಮೊದಲಾದವರು ಉಪಸ್ಥಿತರಿದ್ದರು.

# ಬಿಇಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಸಭಾಪತಿ ಹೊರಟ್ಟಿ



ಮುಂಡರಗಿ, ಜ. 2. ಇಲ್ಲಿಯ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯ (ಬಿಇಡಿ) ಪ್ರಶಿಕ್ಷಣಾರ್ಥಿಗಳೊಂದಿಗೆ ಸಂತಸದ ಕ್ಷಣಗಳನ್ನು ಕಳೆದರು.

ಬಸವರಾಜ ಹೊರಟ್ಟಿ ಅವರು ಬಿಇಡಿ ಕಟ್ಟಡವನ್ನು ಕಂಡು ಸಂತೊಷವ್ಯಕ್ತಪಡಿಸಿ, ಕಟ್ಟಡಗಳಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಲು ಜ ಅ ವಿದ್ಯಾಸಮಿತಿಯ ಆಡಳಿತಾಧಿಕಾರಿ ಡಾ ಬಿ ಜೆ ಜವಳಿ, ಅವರಿಗೆ ಸಲಹೆ ನೀಡಿ, ಪೂಜ್ಯರ ದಿವ್ಯ ಮಾರ್ಗದರ್ಶನದಲ್ಲಿ ಕಟ್ಟಡ ಚೆನ್ನಾಗಿರುವದಕ್ಕೆ ಹರ್ಷವ್ಯಕ್ತಪಡಿಸಿದರು.

ನಂತರ ಬಿಇಡಿ ಪ್ರಶಿಕ್ಷಣಾರ್ಥಿಗಳು ಏರ್ಪಡಿಸಿದ ಹೊಸವರ್ಷದ ಪ್ರಾರಂಭೋತ್ಸವ ಕೇಕ್ ಕತ್ತರಿಸುವದರ ಮೂಲಕ ಪ್ರಶಿಕ್ಷಣಾರ್ಥಿಗಳೊಂದಿಗೆ ತಮ್ಮ ವಿಧ್ಯಾರ್ಥಿ ಜೀವನದ ನೆನಪು ಮಾಡಿಕೊಂಡರು. ಹಾಗೂ ಎಲ್ಲ ವಿಧ್ಯಾರ್ಥಿಗಳಿಗೆ ಉಪನ್ಯಾಸಕರಿಗೆ ಸಿಹಿಯನ್ನು ಸ್ವತಃ ತಿನ್ನಿಸುವದರ ಮೂಲಕ ಅವರೊಂದಿಗೆ ಕೆಲ ಸಮಯ ಕಳೆದರು. ಪ್ರಶಿಕ್ಷಣಾರ್ಥಿಗಳು ಎಲ್ಲರೂ ಉತ್ತಮ ಅಂಕಗಳನ್ನು ಪಡೆದು ಪ್ರತಿಭಾನ್ವಿತರಾಗಿಬೇಕೆಂದು ಹೇಳಿದರು.

ಕಾಲೇಜಗೆ ಆಗಮಿಸಿದ ಪ್ರಶಿಕ್ಷಣಾರ್ಥಿಗಳು, ಹೊರಟ್ಟಿ ಅವರನ್ನು ಹೃದಯ ಪೂರ್ವಕ ಆದರಿಂದ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ವಿ ಪ ಸದಸ್ಯ, ಎಸ್ ವ್ಹಿ ಸಂಕನೂರ, ಆಡಳಿತಾಧಿಕಾರಿ ಡಾ ಬಿ ಜೆ ಜವಳಿ, ಡಾ ಬಸವರಾಜ ಧಾರವಾಡ, ಕರಬಸಪ್ಪ ಹಂಚಿನಾಳ, ಪ್ರಾ ಡಾ ಡಿ ಸಿ ಮಠ, ಪ್ರಾ ಎ ವ್ಹಿ ಹಳ್ಳಿಕೇರಿ, ಎಸ್ ಬಿ ಹಿರೇಮಠ,ಯು ಸಿ ಹಂಪಿಮಠ, ಮುಖ್ಯೋಪಾಧ್ಯಾಯ ಎಸ್ ಸಿ ಚಕ್ಕಡಿಮಠ, ಜೆ ಎ ಬಿಇಡಿ ಕಾಲೇಜ ಪ್ರಾಚಾರ್ಯರು ಹಾಗೂ ಸಿಬ್ಬಂದಿ,ಮೊದಲಾದವರು ಉಪಸ್ಥಿತರಿದ್ದರು.

# ಮುಂಡರಗಿ ಪೂಜ್ಯರಿಗೆ ಗುರುವಂದನೆ



ಮುಂಡರಗಿ, ಜ. 2.ಮುಂಡರಗಿ ಜ ಅನ್ನದಾನೀಶ್ವರ ವಿಧ್ಯಾಸಮಿತಿಯಲ್ಲಿ ಸೇವಾ ನಿವೃತ್ತಿ ಹೊಂದಿದ ಎಸ್ ಎಂ ಅಗಡಿ, ಅವರು ಸೇವಾ ನಿವೃತ್ತಿ ಹೊಂದಿದ್ದರಿಂದ ಅಗಡಿ ಪರಿವಾರದವರು ಜ ನಾಡೋಜ ಡಾ ಅನ್ನದಾನೀಶ್ವರ ಮಹಾಸ್ವಾಮಿಗಳವರಿಗೆ ಗುರುವಂದನೆ ಸಲ್ಲಿಸಿದರು.

ಸಭಾಪತಿಗಳು ಬಸವರಾಜ ಹೊರಟ್ಟಿ, ವಿ ಪ ಸದಸ್ಯ ಎಸ್ ವ್ಹಿ ಸಂಕನೂರ, ಆರ್ ಆರ್ ಹೆಗ್ಗಡಾಳ, ಡಾ ಬಿ ಜಿ ಜವಳಿ, ಡಿಡಿಪಿಐ ಬಸವಲಿಂಗಪ್ಪ, ವಿವೇಕಾನಂದಗೌಡ ಪಾಟೀಲ, ಕರಬಸಪ್ಪ ಹಂಚಿನಾಳ ಮೊದಲಾದವರಿದ್ದರು.

# ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸನ್ಮಾನ



**ಗದಗ:** ಗದಗ ಪ್ರವಾಸದಲ್ಲಿದ್ದ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ನಗರದ ಬಿಜೆಪಿ ಧುರೀಣ ವಿಜಯಕುಮಾರ ಗಡ್ಡಿ ಅವರ ನಿವಾಸಕ್ಕೆ ಸೌಹಾರ್ದ ಭೇಟಿ ನೀಡಿದಾಗ ಗದಗ-ಬೆಟಗೇರಿ ನಗರಸಭೆಯ ಬಿಜೆಪಿ ಸದಸ್ಯೆ ಶ್ರೀಮತಿ ಅನಿತಾ ಗಡ್ಡಿ ಹಾಗೂ ನಗರಸಭೆಯ ಮಾಜಿ ಸದಸ್ಯ ವಿಜಯಕುಮಾರ ಗಡ್ಡಿ ಅವರು ಸಭಾಪತಿ ಹೊರಟ್ಟಿ ಅವರಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಪಾಲ್ಗೊಂಡಿದ್ದರು.